ಶ್ರೀ ಎಂ. ಎಂ. ಪಾಟೀಲ್.—ನೆಪ್ಟೆಂಬರ್ ತಿಂಗಳ ಮೂರನೆಯ ವಾರದಲ್ಲಿಯೇ ರಿಲೀಫ್ ಕಾಮಗಾರಿಗಳನ್ನು ತೀವ್ರವಾಗಿ ತೆಗೆದುಕೊಂಡಿದ್ದೇವೆ, ನಿಧಾನವಾಗಿಲ್ಲವೆಂದು ತಿಳಿಸಲಾಗಿದೆ. ಹಡಗಲಿ ತಾಲ್ಲೂಕಿನಲ್ಲಿ ಯಾವ ಯಾವ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹಡಗಲಿ ತಾಲ್ಲೂಕಿನ ಪಕ್ಕದಲ್ಲಿರತಕ್ಕ ಹಗರಿ ಬೊಮ್ಮನಹಳ್ಳಿ ಪ್ರಾಜೆಕ್ಟನ್ನು ತೆಗೆದುಕೊಂಡಿದ್ದೇವೆ. ಮಣ್ಣಿನ ಕಾಮಗಾರಿಗಳನ್ನು ಕೆಲವು ಕಡೆ ಪ್ರಾರಂಭಿಸಿದ್ದೇವೆ. ಇದರ ಜೊತೆಗೆ ಹಡಗಲಿ ತಾಲ್ಲೂಕು ಮತ್ತು ಅದರ ಪಕ್ಕದ ತಾಲ್ಲೂಕಿನಲ್ಲಿ ಕಾಲುವೆ ಕೆಲಸವನ್ನು ಪ್ರಾರಂಭಿಸಬೇಕೆಂದು ನಾವು ಹೇಳಿದ್ದೇವೆ.

ಶ್ರೀ ಎಂ. ಎಂ. ಪಾಟೀಲ್.—ಕಾಮಗಾರಿಗಳನ್ನು ತೆಗೆದುಕೊಂಡಿರುವುದರಲ್ಲಿ ಹಡಗಲಿ-ರೂಪನಗುಡಿ ರಸ್ತೆಯನ್ನು ತೆಗೆದುಕೊಂಡಿದ್ದೇವೆಂದು ಹೇಳಲಾಗಿದೆ. ಹಡಗಲಿಯಿಂದ ರೂಪನ ಗುಡಿಗೆ ಸುಮಾರು ಒಂದು ನೂರು ಮೈಲಿ ದೂರವಿದೆ. ಹಡಗಲಿಯಿಂದ ರೂಪನ ಗುಡಿಗೆ ನೇರ ರಸ್ತೆ ಹೋಗುತ್ತದೆ. ಇದರಲ್ಲಿ ತಿಳಿಸಿರುವುದು ಬೇರೆ ರಸ್ತೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅದರ ವಿವರ ನನ್ನ ಹತ್ತಿರವಿಲ್ಲ.

Stipends to Trainees of the Compounders' course in the Civil Hospital, Belgaum.

*Q.—224. Sri S. P. TALWALKAR (Raibag).—

Will the Government be pleased to state :—

(*a*) the total number of candidates taking course of Compounders in the Civil Hospital, Belgaum, and among them, the total number of Brahmins and Backward Class and Scheduled Castes candidates ;

(*b*) out of the above candidates, how many candidates are given stipend as per Government orders ;

(*c*) if not, why ;

(*d*) the action they propose to take for the contravention of the Government orders ;

(*e*) whether they are aware that instead of giving stipend tuition fee of Rs. 25 per month is levied on each candidate?

*A.—Sri K. K. HEGDE (Minister for Health).—

(*a*) Total number is 4. One is a Brahmin and the rest belong to other communities.

(*b*) All the candidates undergoing training are granted stipends.

(*c*) and (*d*) Does not arise in view of reply to clause (*b*) above.

(*e*) No. Free training is given to all the candidates.

[ಶ್ರೀ ಎಸ್. ಪಿ. ತಳವಾಳ್ಕರ್ (ಮುರಾಠಿ).—ಫೀ ತೆಗೆದುಕೊಳ್ಳುವುದಿಲ್ಲ; ಉಚಿತ ಶಿಕ್ಷಣ ಕೊಡಲಾಗುತ್ತದೆಂದು ಹೇಳಿದ್ದೀರಿ. ಆದರೆ 25 ರೂಪಾಯಿಗಳನ್ನು ಅವರಿಂದ ತೆಗೆದುಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವೇನು?]

ಶ್ರೀ ಕೆ. ಕೆ ಹೆಗ್ಗಡೆ.—ರೆಕ್ರೂಟ್‌ಮಾಡುವಾಗ ಅಯಾ ಪ್ರದೇಶಗಳಲ್ಲಿದ್ದ ರೀತಿಯಲ್ಲಿ ರೆಕ್ರೂಟ್ ಮಾಡಿದೆ. ಬೊಂಬಾಯಿ ಭಾಗದಲ್ಲಿ 25 ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದರು ಮತ್ತು ಆ ರೀತಿಯಲ್ಲಿ ರೆಕ್ರೂಟ್ ಮಾಡುತ್ತಿದ್ದರು. ನವೆಂಬರ್ ಮೂರನೆಯ ತಾರೀಖಿನ ದಿನ ಈ ರೀತಿ ಫೀ ತೆಗೆದುಕೊಳ್ಳುವುದನ್ನು ಮುನ್ನಾಪಾಡಿ ಆಜ್ಞೆ ಮಾಡಿದ್ದೇವೆ.

Sri B. R. SUNTHANKAR.—Answer to (*a*) is incomplete. The question reads : how many of them are backward classes and Scheduled Castes candidates? The answer says : one is a Brahmin and the rest belong to other communities. May I know the exact number belonging to backward classes and Scheduled Castes?

Sri K. K. HEGDE.—I do not know which are backward communities. For the information of the Member I may say, one is Lingayet, one is Mahratta and the other is a Jain.

Starting of Ferro-manganese plant in Bellary District

*Q.—236. Sri B. E. RAMIAH (Siruguppa).—

Will the Government be pleased to state :—

(*a*) whether they have received any representations and memoranda for starting a ferro-manganese plant in Bellary District ;

(*b*) the number of acres in Bellary District which are rich in iron and manganese ores ;

(*c*) whether they are aware that manganese and iron ore deposits in this District are one of the best available ;

(*d*) whether they would take immediate steps to tap these natural mineral resources and to start a ferro-manganese plant in the District ?

*A.—Sri K. F. PATIL (Minister for Forest and Transport).—

(*a*) Yes.

(*b*) Iron ore : about 82,660 acres. Manganese ore : 22,5000 acres.

(*c*) The iron ore is no doubt the best variety while the quality of manganese ore varies from low to medium.

(*d*) The question of starting a Ferro-Manganese Plant is under active consideration of Government to tap the resources of manganese. Regarding iron ore an area of 85 square miles in the District is reserved for exploitation by Government through the Board of Mineral Development and action to reserve some more area is under consideration of Government.

ಶ್ರೀ ಬಿ. ಇ. ರಾಮಯ್ಯ.—ತಾವು ಅದಷ್ಟು ಐರನ್ ಓರನ್ನು ಉಪಯೋಗಿಸಿಕೊಳ್ಳುವುದಕ್ಕೆ ಯಾವಾಗ ಷುರು ಮಾಡುತ್ತೀರಿ ? ಈಗ ಎರಡು ವರ್ಷಗಳಿಂದಲೂ ಈ ವಿಚಾರದಲ್ಲಿ ಮನವಿಗಳು ಬರುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ ?

†ಶ್ರೀ ಕೆ. ಎಫ್. ಪಾಟೀಲ್.—1957ನೆಯ ಇಸವಿಯಲ್ಲಿಯೇ ಪ್ರಾರಂಭ ಮಾಡಬೇಕೆಂದಿದ್ದೆವು. ಸಾಕಷ್ಟು ಪವರ್ ಇಲ್ಲ. ಪವರ್ ಬಂದ ಕೂಡಲೇ ಪ್ರಾರಂಭ ಆಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಎರಡು ವರ್ಷಗಳಿಂದಲೂ ಅಡಚಣೆಗಳಿವೆಯೆಂದು ಹೇಳಿದ್ದೀರಿ, ಯಾವಾಗ ಮಾಡುತ್ತೀರಿ ?

ಅಧ್ಯಕ್ಷರು.—ಪವರ್ ಬಂದ ಕೂಡಲೇ ಪ್ರಾರಂಭ ಆಗುತ್ತದೆ ಎಂದು ಹೇಳಿದ್ದಾರೆ.

ಶ್ರೀ ಡಿ. ಟಿ. ಸೀತಾರಾಮರಾವ್.—82,660 ಎಕರೆ ಭೂಮಿಯಲ್ಲಿ ಕಬ್ಬಿಣದ ಅದುರು ; 22,500 ಎಕರೆ ಭೂಮಿಯಲ್ಲಿ ಮ್ಯಾಂಗನೀಸ್ ಅದುರು ಇದೆ ಎಂದು ಹೇಳಿದ್ದೀರಿ, ಅವರಲ್ಲಿ ಖಾಸಗಿ ಸಂಸ್ಥೆಗಳಿಗೆ ಸೇರಿದ ಭೂಮಿಯೂ, ಸೇರಿಕೊಂಡಿದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಹೌದು ಖಾಸಗಿ ಸಂಸ್ಥೆಗಳದ್ದೂ ಸೇರಿಕೊಂಡಿದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಸರ್ಕಾರದವರೇ ಈ ಉದ್ಯಮವನ್ನು ನಡೆಸುವುದಕ್ಕೆ ಯೋಚನೆ ಮಾಡುತ್ತಾರೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಮ್ಯಾಂಗನೀಸ್ ದೃಷ್ಟಿಯಿಂದ ಹೇಳುವುದಾದರೆ, ಅದು ಇರುವ ಎಲ್ಲಾ ಕ್ಷೇತ್ರಗಳನ್ನೂ ಖಾಸಗಿ ಉದ್ಯಮಗಳವರಿಗೆ ಕೊಟ್ಟಿದೆ. ವಿಶೇಷ ಕ್ಷೇತ್ರ ಉಳಿದೇ ಇಲ್ಲ. ಸರ್ಕಾರದವರು ತಾವೇ ಫೆರೋ ಮ್ಯಾಂಗನೀಸ್ ಪ್ಲಾನ್ಟ್ ಹಾಕಬೇಕು ಎಂದರೆ ಮ್ಯಾಂಗನೀಸ್ ಕ್ಷೇತ್ರ ಉಳಿದೇ ಇಲ್ಲ. ಐರನ್ ವೇರ್ ಇರುವ 85 ಸ್ಕ್ವೇರ್ ಮೈಲುಗಳಷ್ಟು ಕ್ಷೇತ್ರವನ್ನು ನಿರ್ದಿಷ್ಟವಾಗಿ ಇಟ್ಟುಕೊಂಡಿದ್ದೇವೆ.

Sri VEERENDRA PATIL.—Is it not a fact that the Government have sanctioned about 30 square miles to Sandur Iron ore and Mining company and this Company while taking the lease has made an agreement with the Government to start a ferro-manganese plant within the time stipulated by the Government ?

Sri K. F. PATIL.—It is 29 square miles and not 30 square miles. The Government have entered into an agreement with the Sandur Iron Ore and Mining company.

Sri VEERENDRA PATIL.—The Hon'ble Minister was pleased to say that there was an agreement with the Company. I wanted to know what is the time fixed for them and when it is going to materialise ?

Sri K. F. PATIL.—It is going to materialise immediately when the power is available.

Sri C.K. RAJIAH SETTY.—Is it not a fact that The Tunga Bhadra Project is generating power which can be utilised for this purpose ?

Sri K. F. PATIL.—It is earmarked for something else.

ಶ್ರೀ ಬಿ. ಇ. ರಾಮಯ್ಯ.—ಸರ್ಕಾರದವರು ಸ್ಟಾರ್ಟ್ ಮಾಡುತ್ತಾರೆಯೋ ಅಥವಾ ಯಾರಾದರೂ ಪ್ರೈವೇಟ್ ಕಂಪೆನಿಗಳು ಸ್ಟಾರ್ಟ್ ಮಾಡುವುದಕ್ಕೆ ಲೈಸನ್ಸ್ ಕೊಡುತ್ತಾರೆಯೋ ?

ಶ್ರೀ ಕೆ. ಎಫ್. ಪಾಟೀಲ್.—ನಾನು ಈಗಾಗಲೇ ಹೇಳಿದ ಹಾಗೆ ಸರ್ಕಾರದವರು ಫೆರೋಮ್ಯಾಂಗನೀಸ್ ಪ್ಲಾನ್ಟ್ ಮಾಡುವುದಕ್ಕೆ ಸಾಕಷ್ಟು ಮ್ಯಾಂಗನೀಸ್ ಇರುವ ಕ್ಷೇತ್ರ ಉಳಿದಿಲ್ಲ. ಶ್ರೀ ವೀರೇಂದ್ರ ಪಾಟೀಲ್ ಅವರು ಕೇಳಿದ ಹಾಗೆ ಸಂಡೂರ್ ಮೈನಿಂಗ್ ಮತ್ತು ಐರನ್ ವೋರ್ ಕಂಪೆನಿಗೆ ಕೊಟ್ಟಿರುವುದರಿಂದ ಅವರಿಗೆ ಒತ್ತಾಯಪಡಿಸಿ ಅವರೇ ಸ್ಟಾರ್ಟ್ ಮಾಡುವ ಪ್ರಶ್ನೆ ಇದೆ.

ಶ್ರೀ ಬಿ. ಇ. ರಾಮಯ್ಯ.—ಸರ್ಕಾರದವರು ತಾವು ಸ್ಟಾರ್ಟ್ ಮಾಡುವುದಿಲ್ಲ. ಪ್ರೈವೇಟ್ ಪಾರ್ಟಿಗಳಿಗೂ ಕೊಡುವುದಿಲ್ಲ. ಆದುದರಿಂದ ಅತ್ಯಂತ ಜಾಗ್ರತೆಯಾಗಿ ಫೆರೋಮ್ಯಾಂಗನೀಸ್ ಪ್ಲಾನ್ಟ್ ಮಾಡುವುದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಯಾವಾಗ ಷುರು ಮಾಡುತ್ತೀರಿ ?

ಶ್ರೀ ಕೆ. ಎಫ್. ಪಾಟೀಲ್.—ಮಾನ್ಯ ಸದಸ್ಯರ ಆತುರಕ್ಕಿಂತ ಹೆಚ್ಚಾಗಿ ಸರ್ಕಾರದ ಆತುರ ಇದೆ ಎನ್ನುವುದನ್ನು ಸ್ಪಷ್ಟಪಡಿಸ ಬಯಸುತ್ತೇನೆ. ಪವರ್ ಇಲ್ಲದೆ ಇರುವುದರಿಂದ ಪ್ರೈವೇಟ್ ಪಾರ್ಟಿಗಳಾಗಲೀ ಸರ್ಕಾರಕ್ಕಾಗಲೀ ಸದ್ಯಕ್ಕೆ ಏನು ಮಾಡುವುದಕ್ಕಾಗುವುದಕ್ಕೂ ಶಕ್ಯವಿಲ್ಲ.

ಶ್ರೀ ಎಂ. ಎಂ. ಪಾಟೀಲ್.—ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಫ್. ಪಾಟೀಲ್.—ಅಷ್ಟರೊಳಗೆ ಮಾಡೋಣ ಎಂದು ಇದ್ದೇವೆ. ಮೂರನೆಯದಕ್ಕೆ ಹೋಗುವುದಕ್ಕೆ ಅಗತ್ಯವಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಪವರ್ ಇಲ್ಲದೆ ಇರುವುದರಿಂದ ಪ್ಲಾನ್ಟ್ ಹಾಕುವುದಕ್ಕೆ ಆಗುವುದಿಲ್ಲ ಎಂದು. ನಾನು ಕೇಳುತ್ತೇನೆ : ಗೌರ್ನಮೆಂಟಿನವರು ಪವರ್ ಕೊಡಲಕ್ಕೆ ಆಗಲಿಲ್ಲ. ಫರ್ಮ್ ಕಡೆಯಿಂದ ಪ್ಲಾನ್ಟ್ ಮ್ಯಾನುಫ್ಯಾಕ್ಚರ್ ಮಾಡಿ ತರಿಸುವ ವಿಚಾರದಲ್ಲಿ ಏನು ಪ್ರೊಗ್ರೆಸ್ ಆಗಿದೆ ?

ಶ್ರೀ ಕೆ. ಎಫ್. ಪಾಟೀಲ್.—ಕಂಪೆನಿಯ ಕಡೆಯಿಂದ ಸಾಕಷ್ಟು ಆಶ್ವಾಸನ ಸಿಕ್ಕಿದೆ ; ಪವರ್ ಕೊಟ್ಟು 8 ತಿಂಗಳೊಳಗಾಗಿ ಖಂಡಿತವಾಗಿ ಪ್ಲಾನ್ಟ್ ಎರೆಕ್ಟ್ ಮಾಡಿ ಪ್ರೊಡಕ್ಷನ್ ಸ್ಟಾರ್ಟ್ ಮಾಡುತ್ತೇವೆ ಎಂದು ಹೇಳಿದ್ದಾರೆ.

Sri M. RAMAPPA.—May I know who is the Managing Agent of this Company?

Mr. SPEAKER.—That is outside the the scope of the question.

Sri B. VAIKUNTA BALIGA.—What is the total quantity of iron ore extracted last year?

Sri K. F. PATIL.—I will supply the information later on.

ಶ್ರೀ ಬಿ. ಇ. ರಾಮಯ್ಯ.—ಸರ್ಕಾರದವರು ಸ್ಟಾರ್ಟ್ ಮಾಡುವುದಕ್ಕೆ ಸಾಕಷ್ಟು ಜಮೀನು ಇಲ್ಲ; ಆದುದರಿಂದ ಎಲ್ಲಾ ಪ್ರೈವೇಟ್ ಕಂಪೆನಿಗಳಿಗೆ ಕೊಟ್ಟರ ತಕ್ಕ ಜಮೀನನ್ನು ವಶಪಡಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಯಾವ ಕಂಪೆನಿಗೆ ಫರೋಮ್ಯಾಂಗನೀಸ್ ಪ್ಲಾನ್ಟ್ ಹಾಕಬೇಕು ಎಂದು ಕೊಟ್ಟಿದ್ದೇವೋ ಅವರು ಪವರ್ ಕೊಟ್ಟ ಕೂಡಲೇ ಪ್ಲಾನ್ಟ್ ಹಾಕದೆ ಇದ್ದರೆ ಅದನ್ನು ಸರ್ಕಾರದವರು ವಶಪಡಿಸಿಕೊಳ್ಳುವ ಅಧಿಕಾರ ಇದೆ.

Sri RAMAKRISHNA HEGDE.—May I know whether it is not a fact that pressure is being brought on the Government by the Company to waive the condition of erecting ferro-manganese plant on the ground that the area is not rich with ore?

Sri K. F. PATIL.—It is entirely wrong

Sri C. K. RAJAIAH SETTY.—Are the Government aware that oil furnace is better suited for this purpose than power?

Sri B. D JATTI.—We have not tried that in our State and we have no experience. If the Hon'ble member gives better results, we are prepared to consider that.

ಶ್ರೀ ಬಿ. ಕೆ. ನಾಗೂರ್.—ಪವರ್ ಇಲ್ಲ ಎಂದು ಹೇಳಿದ್ದೀರಿ ; ಪವರ್ ಎಲ್ಲಿದೆ ? ಎಲ್ಲಿಂದ ಬರಬೇಕು ? ಎಷ್ಟು ದಿವಸಗಳಲ್ಲಿ ಬರಬಹುದು ?

ಶ್ರೀ ಕೆ. ಎಫ್. ಪಾಟೀಲ್.—ತಮಗೆ ಬೇಕಾದ ಪವರ್ ಹೇಳಿದರೆ ಉತ್ತರ ಹೇಳುತ್ತೇನೆ.

———

Construction of High Level Causeway near Devarahalli.

*Q.—338. Sri KUNDUR RUDRAPPA (Channagiri).—

Will the Government be pleased to state:—

(*a*) when the estimate for a High Level Causeway and a bridge near Devarahalli, Santhebennur Hobli, Channagiri Taluk, was sanctioned and for what amount;

(*b*) the progress made so far?

A.—Sri H. M. CHANNABASAPPA (Minister for Public Works and Electricity).—

(*a*) Estimates are not yet sanctioned.

(*b*) Estimates prepared are under technical examination.

ಶ್ರೀ ಕುಂದೂರು ರುದ್ರಪ್ಪ.—ಎಸ್ಟಿಮೇಟ್ ತಯಾರಾಗಿಲ್ಲ ಎಂದು ಹೇಳಿದ್ದೀರಿ.

†ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂದಾಜುಗಳು ಮಂಜೂರಾಗಿವೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದೆ ; ಅಂದಾಜುಗಳನ್ನು ತಯಾರು ಮಾಡುತ್ತಿದ್ದೇವೆ.

ಶ್ರೀ ಕುಂದೂರು ರುದ್ರಪ್ಪ.—ಅಂದಾಜು ಎಷ್ಟು ವರ್ಷಗಳ ಹಿಂದೆ ತಯಾರು ಆಗಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ರಸ್ತೆಯ ಮೇಲೆ ಎರಡು ಸೇತುವೆಗಳನ್ನು ಎಂದರೆ ಒಂದು ಸೋಪಿನ ಹಳ್ಳದ ಮೇಲೆ ಮತ್ತು ಇನ್ನೊಂದು ಹಿರೇ ಹಳ್ಳದ ಮೇಲೆ ಹೀಗೆ ಎರಡು ಸೇತುವೆಗಳನ್ನು ಕಟ್ಟುವ ಅವಶ್ಯಕತೆ ಇದೆಯೆಂದು ಸರ್ಕಾರಕ್ಕೆ ಕಂಡು ಬಂದಿದೆ. ಮೊದಲನೆಯದು 50,000 ರೂಪಾಯಿಗಳ ಅಂದಾಜು. ಹಿರೇಹಳ್ಳದ್ದು 3 ಲಕ್ಷ ರೂಪಾಯಿಗಳ ಅಂದಾಜು.

ಶ್ರೀ ಕುಂದೂರು ರುದ್ರಪ್ಪ.—ಯಾವಾಗ ಅಂದಾಜು ತಯಾರಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಶ್ಚಿತವಾದ ತಾರೀಖು ಹೇಳಲಕ್ಕೆ ಸಾಧ್ಯವಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ಈ ಸಂಬಂಧವಾಗಿ 315ನೆಯ ಪ್ರಶ್ನೆ ತಾ 22-7-1957ರಲ್ಲಿ ಬಂದಾಗ ಸರ್ಕಾರದವರು ಸೊಪ್ಪಿನ ಹಳ್ಳದ ಸೇತುವೆಗೆ 40 ಸಾವಿರ ರೂಪಾಯಿಗಳ ಅಂದಾಜಾಗಿನೆ ಎಂದು ಹೇಳಿದ್ದಾರೆ. ಈಗ ಹೇಳುತ್ತೀರಿ 50 ಸಾವಿರ ರೂಪಾಯಿಗಳೆಂದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಸ್ಟಿಮೇಟ್ ರಿವೈಜ್ ಆಗಿರಬಹುದು. ಈಗ ಹೇಳುವುದು ನರಿಯಾದ ವಿಷಯ.

ಶ್ರೀ ಕುಂದೂರು ರುದ್ರಪ್ಪ.—ವರ್ಕ್ ಷುರು ಮಾಡುತ್ತೀರಾ ? ಟ್ರೈಯಲ್ ಪಿಟ್ಸ್ ತೆಗೆದಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡು ಕಡೆಗೂ ಟ್ರೈಯಲ್ ಪಿಟ್ಸ್ ತೆಗೆಯಲು ಈಗಾಗಲೇ ಕೆಲಸ ಪ್ರಾರಿಯಲ್ಲಿದೆ. ಆದರೆ ಟ್ರೈಯಲ್‌ಪಿಟ್ಸ್ ತೆಗೆದ ತಕ್ಷಣ ಕೆಲಸ ಷುರು ಮಾಡುತ್ತೇವೆ ಎಂದು ಅರ್ಥವಲ್ಲ. ಟ್ರೈಯಲ್ ಪಿಟ್ಸ್ ತೆಗೆಯುವುದು ಎಷ್ಟು ಆಡಿ ಕೆಳಗೆ ಕಲ್ಲು ಬಂಡೆ ಸಿಕ್ಕುತ್ತದೆ ಎಂದು ನೋಡಿ ಅಂದಾಜು ಮಾಡುವುದಕ್ಕೆ.

ಶ್ರೀ ಕುಂದೂರು ರುದ್ರಪ್ಪ.—ಎಸ್ಟಿಮೇಟ್ ಮಂಜೂರು ಆಗಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ ಎಂದು ಖಚಿತವಾಗಿ ಹೇಳಿವ್ವೇವೆ.

ಶ್ರೀ ಕುಂದೂರು ರುದ್ರಪ್ಪ.—1957ನೆಯ ಇಸವಿಯಲ್ಲಿ ಎಸ್ಟಿಮೇಟ್ ತಯಾರು ಮಾಡಿದ್ದಾರೆ. 1958ನೆಯ ಇಸವಿಯಲ್ಲಿ ಕೆಲಸ ಷುರು ಮಾಡುತ್ತೇವೆ